


mೊದಲ ಆವೃತ್ತಿಯಲ್ಲಿ ಆಡಿದ್ದು ಏಳು ಪಂದ್ಯ. ಗಳಿಸಿದ್ದು ಐದು ಪಾಯಿಂಟ್. ಎರಡನೇ ಆವೃತ್ತಿಯಲ್ಲಿ 15 ಪಂದ್ಯ ಆಡುವ ಅವಕಾಶ ಗಳಿಸಿದ ಅವರು ನಾಲ್ಕು ಟ್ಯಾಕ್ಲಿಂಗ್ ಪಾಯಿಂಟ್ ಸೇರಿ ಒಟ್ಟು 58 ಪಾಯಿಂಟ್‌ಗಳನ್ನು ಬಗಲಿಗೆ ಹಾಕಿಕೊಂಡರು. ಈ ಆವೃತ್ತಿಯಲ್ಲಿ ಅವರು ಮಾಡಿದ ರೈಡ್‌ಗಳ ಸಂಖ್ಯೆ ಮೂರಂಕಿ (106) ದಾಟಿತ್ತು. ಮೂರನೇ ಆವೃತ್ತಿಯಲ್ಲಿ 13 ಪಂದ್ಯ ಆಡಿದ ರೈ 35 ರೈಡ್ ಮಾಡಿ ಕೇವಲ 12 ಪಾಯಿಂಟ್ ಮಾತ್ರ ಗಳಿಸಿದ್ದರು. ಕಳೆದ ಋತುವಿನಲ್ಲಿ ಒಂಬತ್ತು ಪಂದ್ಯಗಳಲ್ಲಿ 39 ರೈಡ್ ಮಾಡಿದ್ದರು. ಕೇವಲ 19 ಪಾಯಿಂಟ್‌ಗಳನ್ನು ಮಾತ್ರ ಗಳಿಸಿದ್ದರು.

ಎಸ್‌ಎಸ್‌ಎಲ್‌ಸಿ ಪೂರಕ ಪರೀಕ್ಷೆಯಲ್ಲಿ ಪಾಸಾದ ಕಾರಣ ಕಾಲೇಜಿನಲ್ಲಿ ಪ್ರವೇಶ ಸಿಗುವುದು ಕಷ್ಟ ಎಂದುಕೊಂಡ ಪ್ರಶಾಂತ್ ಕ್ರೀಡಾಪಟು ಎಂದು ಸುಳ್ಳು ಹೇಳಿ ಕಾಲೇಜು ಸೇರಿದರು. ಹೀಗಾಗಿ ಅನಿವಾರ್ಯವಾಗಿ ಕ್ರೀಡಾಪಟುವಾಗಬೇಕಾಯಿತು. ವೇಟ್‌ಲಿಫ್ಟಿಂಗ್ ಮಾಡಲು ಆರಂಭಿಸಿದ ಅವರ ಒಲವು ಎರಡನೇ ಪಿಯುಸಿಯಿಂದ ಕಬಡ್ಡಿಯತ್ತ ವಾಲಿತು. ಅಂತರ ವಿಶ್ವವಿದ್ಯಾಲಯ ಮಟ್ಟದಲ್ಲಿ ಬೆಳಗಿದರು. ಕ್ರೀಡಾ ಕೋಟಾದಲ್ಲಿ ಪೊಲೀಸ್ ಸೇರಿದರು. ನಂತರ ವಿಜಯ ಬ್ಯಾಂಕಿನವರು ಕರೆದು ಉದ್ಯೋಗ ಕೊಟ್ಟರು.

‘ತಂದೆ ಕೆಎಸ್‌ಆರ್‌ಟಿಸಿ ಚಾಲಕ. ತೋಟವೂ ಇತ್ತು. ಆದರೂ ಮಧ್ಯಮವರ್ಗ ಎಂಬ ಸ್ಥಿತಿಯಿಂದ ಮೇಲೇಳಲು ಆಗಲಿಲ್ಲ. ಉದ್ಯೋಗ ಲಭಿಸಿದರೂ ಒಮ್ಮೆಲೆ ಲಕ್ಷಗಟ್ಟಲೆ ಹಣ ಬರುವ ಸ್ಥಿತಿ ಇರಲಿಲ್ಲ. ಪ್ರೊ ಕಬಡ್ಡಿಯಿಂದಾಗಿ ಸಾಕಷ್ಟು ಹಣ ಬಂದಿದೆ. ಇದರಿಂದಲೇ ಚಂದದ ಮನೆ ಕಟ್ಟಲು ಸಾಧ್ಯವಾಯಿತು’ ಎಂದು ಹೇಳುತ್ತಾರೆ ಪ್ರಶಾಂತ್.

## ‘ಪ್ರಪಂಚ’ಕ್ಕೆ ತೆರೆದುಕೊಂಡರು!

ತಮಿಳುನಾಡಿನ ಸೇಲಂ ಮತ್ತು ಈರೋಡ್ ಮಧ್ಯದ ಸಂಗಿಗಿರಿ ಗ್ರಾಮದಲ್ಲಿ ಹುಟ್ಟಿ ಬೆಳೆದ ಪ್ರಪಂಚನ್ ತಮಿಳ್ ತಲೈವಾಸ್ ತಂಡದ ಪ್ರಮುಖ ರೈಡರ್. ಯು ಮುಂಬಾ ಮೂಲಕ ಪ್ರೊ ಕಬಡ್ಡಿಗೆ ಪ್ರವೇಶಿಸಿದ ಅವರು ಬೆಂಗಳೂರಿನಲ್ಲಿ ಕಸ್ಟಮ್ಸ್ ಇಲಾಖೆಯಲ್ಲಿದ್ದಾರೆ. ಸೈನ್ಯ ಸೇರಲು ಪ್ರಯತ್ನಿಸಿದ ಪ್ರಪಂಚನ್ ವಯಸ್ಸು ಮೀರಿದ್ದರಿಂದ ವಾಪಸಾದರು. ಅವರ ಆಟದ ಚಾಕಚಕ್ಯತೆ ಗುರುತಿಸಿದ ಮುಂಬಾ ತಂಡದ ಕೋಚ್ ಭಾಸ್ಕರನ್ ತಮ್ಮ ತಂಡಕ್ಕೆ ಕರೆಸಿಕೊಂಡರು. ತಂಡದಲ್ಲಿ ಅವರ ಆಟವನ್ನು ಗಮನಿಸಿದ ಕಸ್ಟಮ್ಸ್ ಇಲಾಖೆಯವರು ಕ್ರೀಡಾ ಕೋಟಾದಡಿ ಉದ್ಯೋಗ ನೀಡಿದರು.

‘ಆರ್ಥಿಕವಾಗಿ ಗಟ್ಟಿ ಇಲ್ಲದಿದ್ದ ನನ್ನ ಕುಟುಂಬ ಈಗ ಬಲಿಷ್ಠವಾಗಿದೆ. ಸಾಮಾಜಿಕವಾಗಿಯೂ ತುಂಬ ಗೌರವ ಸಿಕ್ಕಿದೆ. ನಮ್ಮ ಗ್ರಾಮದಲ್ಲಿ ನನ್ನ ಅಭಿಮಾನಿ ಸಂಘವೂ ಸ್ಥಾಪನೆಯಾಗಿದೆ’ ಎನ್ನುತ್ತಾರೆ ಪ್ರಪಂಚನ್. ಕನ್ನಡ–ವನ್ನು ಸುಲಲಿತವಾಗಿ ಮಾತನಾಡುವ ಪ್ರಪಂಚನ್ ಈ ಬಾರಿ ಮೊದಲ ಎರಡು ಪಂದ್ಯಗಳಲ್ಲಿ ಒಟ್ಟು 13 ರೈಡಿಂಗ್ ಪಾಯಿಂಟ್ ಕಲೆ ಹಾಕಿದ್ದರು. 30 ರೈಡ್‌ಗಳಲ್ಲಿ 13 ಬಾರಿ ಪಾಯಿಂಟ್ ಗಳಿಸಲು ಸಫಲರಾಗಿರುವ ಅವರು ಐದು ಬಾರಿ ಮಾತ್ರ ಎದುರಾಳಿಗಳ ಬಲೆಗೆ ಬಿದ್ದಿದ್ದಾರೆ.

ಮೊದಲ ಎರಡು ವರ್ಷ ತಲಾ ನಾಲ್ಕು ಪಂದ್ಯಗಳನ್ನು ಆಡಿದ್ದರು. ಮೊದಲ ವರ್ಷ ಏಳು ಪಾಯಿಂಟ್ ಗಳಿಸಿದ್ದರೆ ನಂತರದ ವರ್ಷ ಕೇವಲ ನಾಲ್ಕು ಪಾಯಿಂಟ್ ಮಾತ್ರ ಪಡೆದಿದ್ದರು. ಕಳೆ ಬಾರಿ 11 ಪಂದ್ಯಗಳಲ್ಲಿ ಒಟ್ಟು 42 ರೈಡ್ ಮಾಡಿದ್ದ ಅವರು 12 ಪಾಯಿಂಟ್ ಗಳಿಸಿದ್ದರು.

## ಟಾಪ್ 5

### ಹರಾಜಿನಲ್ಲಿ ಅತ್ಯಧಿಕ ಮೊತ್ತ ಗಳಿಸಿದ ಐವರು ಭಾರತದ ಆಟಗಾರರು

| | |
|---|---|
| ನಿತಿನ್ ತೋಮರ್ | ₹93 |
| ರೋಹಿತ್ ಕುಮಾರ್ | ₹81 |
| ಮನ್‌ಜೀತ್ ಚಿಲ್ಲಾರ್ | ₹75.5 |
| ಸುರ್ಜೀತ್ ಸಿಂಗ್ | ₹73 |
| ಸೆಲ್ವಮಣಿ | ₹73 |

★ ಮೊತ್ತ (ಲಕ್ಷ ರೂಪಾಯಿಗಳಲ್ಲಿ)



ಪ್ರದೀಪ್ ನರ್ವಾಲ್
ಪ್ರಪಂಚನ್

ವಿನ್ಯಾಸ: ದಿಲ್